


ಕೆರೆ ತುಂಬ ನೀರು ಬಂದ ಬಳಿಕ ಹಳ್ಳಿ ಹಬ್ಬಕ್ಕೆ ಇನ್ನಷ್ಟು ಮೆರುಗು

# ಹೈರಾಣಾದ ಹಳಿಯಾಳಕ್ಕೆ ಕೆರೆ ಕಲ್ಯಾಣ

**ನೋಡನೋಡುತ್ತಲೇ ಭತ್ತದ ಕಣಜದ ಖ್ಯಾತಿಯ ನೆಲ, ಸಕ್ಕರೆ ಕಾರ್ಖಾನೆ ಆರಂಭಗೊಂಡ ದಶಕದೀಚೆಗೆ ಕಬ್ಬಿನ ಹಿಂದೆ ಓಡಿದೆ; ಕೃಷಿ ನೀರಿನ ಬಳಕೆ ಏರಿದೆ. ಹೂಳು ತುಂಬಿದ ಕೆರೆ, ಮಳೆ ಕೊರತೆಗಳಿಂದ ಅಂತರ್ಜಲವೂ ಕುಸಿದು ಜಲಕ್ಷಾಮದ ಏಟು ಬಿದ್ದಿದೆ. ಜಲಸಂಕಟ ಪರಿಹಾರಕ್ಕೆ ಐದೇ ಐದು ವರ್ಷಗಳ ಹಿಂದೆ ಕೆರೆಗಳ ಹೂಳೆತ್ತುವ ಕಾರ್ಯ ಜನಸಹಭಾಗಿತ್ವದಲ್ಲಿ ನಡೆದು ಕೆರೆಗಳಿಗೆ ಮರುಜೀವ ಬಂದಿತು. ಮಳೆ ನೀರು ಕೆರೆ ತುಂಬಿ ಮೀನಿನ ಸುಗ್ಗಿಯೂ ನಡೆದಿದೆ. ಕಾಡ ಸೆರಗಿನ ಹಳಿಯಾಳದ ನೀರ ಕಾಯಕದ ಐದು ವರ್ಷಗಳ ಚಿತ್ರ ಚೈತನ್ಯ ಇಲ್ಲಿದೆ.**

■ ಶಿವಾನಂದ ಕಳವೆ

ನದಿಗಳು ಒಣಗಿ ನೀರಿಗೆ ಟ್ಯಾಂಕರ್ ಓಡಿಸುವ ದುಃಸ್ಥಿತಿ ಮಲೆನಾಡಿನಲ್ಲಿ ಕಾಣಿಸಿತ್ತು. ಕೊಳವೆ ಬಾವಿ ಕೊರೆಯುವುದಕ್ಕೆ ರೈತರು ಮುಗಿಬಿದ್ದರು. ಐದು ಸಾವಿರಕ್ಕೂ ಹೆಚ್ಚು ಕೊಳವೆ ಬಾವಿ ಕೊರೆಯುವ ಯಂತ್ರಗಳು ಮಳೆ ಕಾಡಿನ ಪಶ್ಚಿಮಘಟ್ಟದ ಪ್ರದೇಶದಲ್ಲಿ ಕಾರ್ಯನಿರ್ವಹಿಸಿದ್ದವು. ನದಿಗಳ ನಾಡು ಕಂಗಾಲಾಗಿತ್ತು. ದಿನ ಬೆಳಗಾದರೆ ರಸ್ತೆಯಲ್ಲಿ ಸಿಗುವುದೆಲ್ಲ ಪೈಪ್ ಸಾಗಿಸುವ ವಾಹನ, ಕೊಳವೆ ಬಾವಿ ಕೊರೆವ ಯಂತ್ರ, ಖಾಲಿ ಕೊಡಗಳ ದರ್ಶನ. ಜನ ಜಾನುವಾರಗಳ ಸಂಕಟಗಳ ಮಧ್ಯೆ ಉಷ್ಣತೆ 38 ಡಿಗ್ರಿ ದಾಟಿ ಊರೆಲ್ಲ ಉರಿಯುತ್ತಿದ್ದ ಕಾಲವದು. ಇಂಥ ಸಂದರ್ಭದಲ್ಲಿ 'ನಾಳೆ ಬೆಳಿಗ್ಗೆ ಹಳಿಯಾಳಕ್ಕೆ ಬರಬೇಕು' ಎಂದು ದೇಶಪಾಂಡೆ ಟ್ರಸ್ಟ್ ಆಡಳಿತಾಧಿಕಾರಿ ಪ್ರಕಾಶ ಪ್ರಭು ಕರೆ ಮಾಡಿದ್ದರು. ಅಲ್ಲಿನ ಕೆರೆಗಳನ್ನು ವೀಕ್ಷಿಸಿ ಹೂಳೆತ್ತಲು ಸಲಹೆ ನೀಡಬೇಕಿತ್ತು.

2016ರ ಏಪ್ರಿಲ್ 20ರ ದಿನ ಹಳಿಯಾಳದ ರಸ್ತೆಗಳಲ್ಲಿ ಹಿಟ್ಯಾಚಿ, ಜೆಸಿಬಿ, ಟಿಪ್ಪರ್, ಟ್ರ್ಯಾಕ್ಟರ್‌ಗಳ ದೊಡ್ಡ ಮೇಳ. ಕೆರೆಯ ಫಲವತ್ತಾದ ಹೂಳನ್ನು ಹೊಲಕ್ಕೆ ಸಾಗಿಸಲು ವಾಹನಗಳು ಸಾಲುಗಟ್ಟಿದ್ದವು. ಬರದ ಸಂಕಟದಲ್ಲಿ ಕೃಷಿಕರೆಲ್ಲ ಕಣ್ಣರಳಿಸಿ ಕೆರೆದಂಡೆಯಲ್ಲಿ ಜಾತ್ರೆಯಂತೆ ಜಮಾಯಿಸಿದ್ದರು. ಅವರೆಲ್ಲ ಭೀಕರ ಜಲಕ್ಷಾಮದ ಮಧ್ಯೆ ನೀರಿನ ನೋವಿಗೆ ಪರಿಹಾರ ದೊರೆಯುವ ನಿರೀಕ್ಷೆಯಲ್ಲಿ ನಿಂತಿದ್ದರು.

ಸರಿಸುಮಾರು 40–45 ಹಿಟ್ಯಾಚಿ, ಜೆಸಿಬಿಗಳು ಕೆಲಸಕ್ಕೆ ಇಳಿದಿದ್ದವು. ಯಂತ್ರಗಳನ್ನು ಕೆರೆಗೆ ಇಳಿಸಿದ ಮಾತ್ರಕ್ಕೆ ಕೆಲಸ ನಡೆಯುವುದಿಲ್ಲ. ನಿರಂತರ ಕೆಲಸ ವೀಕ್ಷಣೆ

